ಪಾರ್ಟಿ ಅರೆಂಜ್ ಮಾಡಬೇಕು. ಅವರಿಗಿ ಏನಾರ ಗಿಫ್ಟ್ ಕೊಡಬೇಕು. ಇಲ್ಲಂದರ ಯಾರು ಮೂಸಿ ನೋಡೋದಿಲ್ಲ. ಈಗ ಜಿಲ್ಲಾ ಪಂಚಾಯಿತಿಗೆ ನೂರಾರು ಕೋಟಿ ಹರದು ಬರುತ್ತೆ. ಅದ್ರಾಗ ಒಂದು ಮೂವತ್ತು ಪರ್ಸೆಂಟ್ ಖರ್ಚು ಮಾಡೋದು ಉಳಿದದ್ದನ್ನ ಎಲ್ಲರಿಗೆ ಹಂಚೋದು. ಇದೇ ರಾಜಕಾರಣಲೇ ತಿಳುಕೋ. ಅದಕ್ಕ ಅಧಿಕಾರ ಬಂದಾಗ ಎಷ್ಟು ಸಾಧ್ಯನೋ ಅಷ್ಟು ಬಳದು ಹಾಕ್ಯಾಂಬೇಕು.' ಎಂದು ಹೇಳುತ್ತಿದ್ದರು. ಗೌಡರು ಹೇಳಿದಂತೆ ಕೇಳಿಕಂಡು ದುರುಗ ದುರುಗಪ್ಪ ಸಾಹುಕಾರನಾಗಿ ಇದ್ದ.

ಕಣ್ಣು ಮುಚ್ಚಿ ಕಣ್ಣು ತೆರೆದ್ರಾಗ ಕೇರಿ ಮಂದಿ ಬಂದು ಸುತ್ತುವರದಿದ್ದರು. ಮಂದಿ ಸಮೀಪ ಬರೋದನ್ನ ನೋಡಿ ಕಾರಿನಲ್ಲಿ ಕುಳಿತುಕೊಂಡ. 'ಆ ನೀವು ಚಿಂತಿ ಮಾಡಬ್ಯಾಡ್ರಿ. ನಿಮ್ಮ ಸಮಸ್ಯೆ ಏನಾವ. ಎಲ್ಲಾ ಬಗೆ ಹರಸ್ತೀನಿ. ಆ ಅಮರ್‍ಯಾನ್ನ ಬರಾಕ ಹೇಲ್ರಿ. ಕೆಲಸ ಮಾಡಸ್ತೀನಂತ ಯರ್‍ಯಾರ ಹತ್ತಿರ ರೊಕ್ಕ ಇಸುಗಂಡಾನ. ಅವನಿಗಿ ಬೈದು ವಾಪಿಸು ಕೊಡುಸ್ತೀನಿ' ಅಂದ.

ಜನತಾ ಮನೆಯಲ್ಲಿ ಮಕ್ಕಂಡಿದ್ದ ಅಮರೇಶನನ್ನು ಕರೆದುಕೊಂಡು ಬಂದರು. 'ಏನಲೇ ನಿನಗ ಬುದ್ಧಿ ಐತಿಲ್ಲ. ರೇಷನ್ ಕಾರ್ಡ್ ಮಾಡಸ್ತೀನಿ, ಪಿಂಚಣಿ ಮಾಡಸ್ತೀನಿ, ಮನೆ ಕಟ್ಟಸಿಕೊಡ್ತೀನಿ. ಹೊಲಕ್ಕ ಬೋರು ಹಾಕಸ್ತೀನಿ, ಕೆಲಸ ಕೊಡಸ್ತೀನಿ, ಏನೇನೋ ಮಾಡ್ತೀನಿ ಅಂದು ಈ ಜನರತ್ರ ಯಾಕ ರೊಕ್ಕ ತಗಂಡಿದ್ದಿ. ಈಗ ಎಲ್ಲಾರಿಗೂ ಕೊಟ್ಟುಬುಡು. ಯಾರಿಗೆ ಏನೇನು ಬೇಕೋ ಇನ್ನಾ ತಿಂಗಳದಾಗ ಎಲ್ಲಾ ಮಾಡಿಸಿಕೊಡ್ತೀನಿ. ಅಮರೇಶನೆ ಎಲ್ಲಾ ಓಡಾಡಿ ಮಾಡ್ತಾನ. ಸಂಜಿಗಿ ನೀವು ಕೊಟ್ಟ ರೊಕ್ಕ ವಾಪಿಸು ಕೊಡ್ತಾನ' ಎಂದು ಅಮರೇಶನನ್ನು ಕಾರಲ್ಲಿ ಕೂಡಲು ಹೇಳಿ ಅಲ್ಲಿಂದ ಮನೆ ಕಟ್ಟಸೋ ಸೈಟಿನ ಕಡೆ ಬಂದ. ಕಾರು ನೋಡಲು ಬಂದ ಜನ, ಹುಡುಗರು ಕಾರಿನ ಧೂಳಿನಲ್ಲಿ ಮುಳುಗಿ ಹೋದರು.

ಕಾರು ಸ್ವಲ್ಪ ಮುಂದ ಬಂದ ಮೇಲೆ ಒಂದು ಗಿಡದ ಕೆಳಗ ನಿಲ್ಲಸಿದರು. 'ಲೇ ಅಂಬ್ರ್ಯಾ ಆ ಡಿಕ್ಕಿ ತೆರಿಲೆ. ಅದ್ರಾಗ ಎಳೆ ನೀರು ಐದಾವ ಕಡದು ಕೊಡು. ನೀವಂದೊಂದು ಕುಡಿರಿ' ಎಂದು ಕೆಳಗ ಇಳಿದು ನಿಂತುಕೊಂಡ. ನಾಲ್ಕು ಬಾದಾಮಿಯನ್ನು ಬಾಯಲ್ಲಿ ಹಾಕೊಂಡ.



'ನೋಡೋ ನೀನು ಈ ಚಿಲ್ಲರೆ ರೊಕ್ಕಕ್ಕ ಆಶೆ ಪಡುಬ್ಯಾಡ. ನನ ಜೊತಿಗೆ ಇರು. ಹೇಳಿದ ಕೆಲಸ ಮಾಡು. ನಿನ ಜೀವನಕ್ಕ ಬೇಕಾದ್ದು ನಾನು ಕೊಡ್ತೀನಿ. ಒಂದು ಮನೆ ಕಟ್ಟಸಿಕೋ. ಬೈಕ್ ತಗೊ ಎಲ್ಲಾ ವ್ಯವಸ್ಥಾ ಮಾಡ್ತೀನಿ' ಎಂದು ಎರಡು ಎಳೆ ನೀರು ಕುಡಿದ.

'ನನಗ ಒಂದು ಖಾಯಂ ಕೆಲಸ ಬೇಕು. ಈ ಕೆಲಸಗಳು ಮಾಡಿ ಮಾಡಿ ಸಾಕಾಗ್ಯಾದ.'

ನಿನಗ ಗೊತ್ತಿಲ್ಲಲೆ. ನಿನಗೊಂದು ಕೆಲಸ ಕೊಡಿಸಿದರ ತಿಂಗಳಿಗೆ ಬಾಳಂದರ ಒಂದು ಇಪ್ಪತ್ತು ಸಾವಿರ ಸಿಕ್ಕೀತು ಅಷ್ಟೆ. ನನ ಜೊತಿಗಿ ಇದ್ದರ ಅದಕ್ಕಿಂತಲೂ ಹೆಚ್ಚಿಗಿ ಸಿಗುತೈತಿ. ನಿಮ್ಮಂತ ಯುವಕರು ಕೆಲಸ ಮಾಡಿದರ ನಾವು ಗೆಲ್ಲೋದು. ಜನರ ಕಾರ್ಯ ಮಾಡಾಕಾಗೋದು. ಈಗ ಒಂದು ಲಕ್ಷ ಕೊಡ್ತೀನಿ ಇಟ್ಟುಕೋ'

'ನೀವು ಎಷ್ಟು ದಿನ ಅಧಿಕಾರದಾಗ ಇರ್ತೀರಿ. ಆಮೇಲೆ ನಾನೇನು ಮಾಡಬೇಕು. ನನಗ ಭದ್ರತೆ ಬೇಕು'

'ಅದೆಲ್ಲಾ ನನಗ ಬಿಡು. ನಿನಗ ಮನೆ ಕಟ್ಟಸಿಕೊಡ್ತೀನಿ. ನಿನ ತಂಗಿಗೊಂದು ಕೆಲಸ ಕೊಡಸ್ತೀನಿ. ತಿಂಗಳಿಗೆ ಮೂವತ್ತು ಸಾವಿರ ಕೊಡ್ತೀನಿ. ಚುನಾವಣ್ಯಾಗ ನಿಯತ್ತಿನಿಂದ ಕೆಲಸ ಮಾಡು. ಈಗೊಂದು ಹತ್ತು ನೀರಿನ ಟ್ಯಾಂಕ್ ಕಟ್ಟಸಬೇಕು. ಒಂದು ನೀರಿನ ಟ್ಯಾಂಕ್ ಕಾಂಟ್ರ್ಯಾಕ್ಟ ನಿನಗ ಕೊಡಸ್ತೀನಿ. ಇಂತವು ವರ್ಷಕ್ಕೊಂದೆರಡು ನಿನಗ ಸಿಗಂಗ ಮಾಡ್ತೀನಿ. ಅದ್ರಾಗ ಬೇಕಾದಷ್ಟು ಉಳಿತದ.'

'ಆಯಿತು ನಿಮ್ಮ ಜೊತಿಗಿ ಇರ್ತೀನಿ. ನನ ತಂಗಿಗೆ ಗ್ಯಾರಂಟಿ ಕೆಲಸ ಕೊಡಸಬೇಕು. ಆಕಿ ಒಂದು ಕಾಲು ಬಾಳ ಸಣ್ಣಾದ. ಕುಂತಲ್ಲೇ ಕೆಲಸ ಮಾಡ್ತಾಳಷ್ಟೆ.'

'ಅದಕ್ಕೆಲ್ಲಾ ವ್ಯವಸ್ಥಾ ಮಾಡ್ತೀನಿ. ಜಿಲ್ಲಾಧಿಕಾರಿ ಜತಿಗಿ ಮಾತಾಡಿ, ಖಾಯಂ ಕೆಲಸನೆ ಕೊಡಿಸಿಬಿಡ್ತಿನಿ' ಎಂದು ಹೆಗಲ ಮ್ಯಾಲೆ ಕೈ ಹಾಕಿಕೊಂಡು ಬಾಳ ಆತ್ಮೀಯತೆ ತೋರಿಸಿದ. ಒಂದಿಷ್ಟು ಗೋಡಂಬಿ ತಿನ್ನಲು ಕೊಟ್ಟ.

ಮಟ ಮಟ ಮಧ್ಯಾಹ್ನ ಆಗಿತ್ತು. ಗಾಳಿ ಕಟ್ಟಾಗಿತ್ತು. ಮರಗಳು ನಿಶ್ಚಲ ನಿಂತಿದ್ದವು. ಬಿಸಿಲು ಏರಿ ನೆತ್ತಿ ಸುಡುತಿತ್ತು. ಕಣ್ಣು ಹಾಯಿಸಿದಲ್ಲೆಲ್ಲ ಝಳ ಉಗ್ಗುವ ಬಯಲು. ದುರುಗಪ್ಪ ಸಾಹುಕಾರರ ಮೈಯಿಂದ ದಳ ದಳ ನೀರು ಇಳಿಯುತ್ತಿತ್ತು. 'ಏನು ಸುಡುಗಾಡು ಬಿಸಲಪ ಇದು. ಗಿಡದ ನೆಳ್ಳಿಗಿ ನಿಂತರೂ ನೀರು ಇಳಿತಾವ'